

# ಕಾಗಿನೆಲೆಯ ನೃತ್ಯ ಕಾರಂಜಿ

■ ಚಿತ್ರ– ಬರಹ: **ಪ್ರಕಾಶ ಎಸ್. ಮನ್ನಂಗಿ**

**ಭೂ**ರಮೆಯೇ ಸೌಂದರ್ಯವತಿಯರೊಂದಿಗೆ ಬಣ್ಣದ ಓಕುಳಿ ಚೆಲ್ಲುತ್ತ ಹೋಳಿಯಾಡಿದಂತೆ! ಈ ನೃತ್ಯ ಕಾರಂಜಿ ಇಂಥದೊಂದು ಅನುಭವ ನೀಡುತ್ತ ಮನ ಸೆಳೆಯುತ್ತದೆ.

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಕನಕ ಪರಿಸರ ಸ್ನೇಹಿ ಉದ್ಯಾನವನದಲ್ಲಿ ಪ್ರವಾಸೋದ್ಯಮ ಇಲಾಖೆ ಈ ಸಂಗೀತ ನೃತ್ಯ ಕಾರಂಜಿಯನ್ನು ರೂಪಿಸಿದೆ. ಇದು ಮೈಸೂರು ಕೆ.ಆರ್.ಎಸ್. ಸಂಗೀತ ಕಾರಂಜಿಗಿಂತ ಎರಡು ಪಟ್ಟು ದೊಡ್ಡದು. ಈ ಭಾಗದಲ್ಲಿಯೇ ಅತಿ ದೊಡ್ಡ ಸಂಗೀತ ಕಾರಂಜಿ. ಸದ್ಯ 8 ಹಾಡುಗಳನ್ನು ಅಳವಡಿಸಲಾಗಿದ್ದು, ಪ್ರದರ್ಶನದ ಅವಧಿ 30 ನಿಮಿಷ.

ಸಂತ ಕನಕದಾಸರ ಕೀರ್ತನೆಗಳಿಗೆ ವಿದ್ಯುತ್ ದೀಪಾಂಕೃತ ನೀರಿನ ಸಂಗೀತ ನೃತ್ಯದ ಕಾರಂಜಿಯು ಪ್ರವಾಸಿಗರ ಹೃದಯದಲ್ಲಿ ಸಂತಸ ಉಕ್ಕಿಸುತ್ತದೆ. ಪ್ರತಿ ಶನಿವಾರ ಹಾಗೂ ರವಿವಾರ ಸಂಜೆ 6.30 ರಿಂದ 8.00 ಗಂಟೆಯವರೆಗೆ ಈ ಸಂಗೀತ ಕಾರಂಜಿಯ ಪ್ರದರ್ಶನವಿದೆ. ಹಬ್ಬದ ದಿನಗಳಲ್ಲೂ ವಿಶೇಷ ಪ್ರದರ್ಶನಗಳಿರುತ್ತವೆ.

ಸ್ನಾತಕೋತ್ತರ ಪದವೀಧರರಾದ ಅಶೋಕ ಗಾಜಿಯವರು ತಂತ್ರಜ್ಞಾನದ ಮೋಡಿಯಲ್ಲಿ ಇಲ್ಲಿ ಜನರನ್ನು ಪರವಶಗೊಳಿಸುವ ಬಣ್ಣದ ಗಾರುಡಿಗರಾಗಿದ್ದಾರೆ. ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಹೊಸಪೇಟೆ ಮಲ್ಲೇಶಪ್ಪನವರ ಅರ್ಪಣಾ ಮನೋಭಾವವೂ ಕೆಲಸ ಮಾಡಿದೆ.

ಹಾವೇರಿ, ಉತ್ತರ ಕನ್ನಡ, ಧಾರವಾಡ, ಶಿವಮೊಗ್ಗ ಜಿಲ್ಲೆಯ ಆ ತುದಿಯಿಂದ ವಾಹನಗಳಲ್ಲಿ ಜನರು ತಂಡೋಪತಂಡವಾಗಿ ಹುರುಪಿನಿಂದ ಕಾರಂಜಿ ವೀಕ್ಷಿಸಲು ಬರುತ್ತಾರೆ. ಅದೇ ಕಣ್ಣುಗಳಿಗೆ ಹಬ್ಬದಂತೆ. ಚಕ್ಕಡಿ ಹೂಡಿಕೊಂಡು ಬರುವ ಹಳ್ಳಿಗರ ಎತ್ತಿನ ಗೆಜ್ಜೆಯ ನಾದದಲ್ಲಿ ಈ ಸಂಗೀತ ನೃತ್ಯದ ಕಾರಂಜಿಯ ಕಲರವ ಮಿಳಿತಗೊಂಡಿದೆ. ●



